सत्यमेव जयते

**INDIA NON JUDICIAL**

## Government of Karnataka

**Rs. 100**

**e-Stamp**

| | | |
|---|---|---|
| Certificate No. | : | IN-KA92641536442781U |
| Certificate Issued Date | : | 01-Aug-2022 06:07 PM |
| Account Reference | : | NONACC/ kakscsa08/ MYSORE NORTH4/ KA-MY |
| Unique Doc. Reference | : | SUBIN-KAKAKSCSA0802521803210383U |
| Purchased by | : | AKSHAY M R |
| Description of Document | : | Article 30 Lease of Immovable Property |
| Description | : | RENT AGREEMENT |
| Consideration Price (Rs.) | : | 0<br>(Zero) |
| First Party | : | ASHWATH |
| Second Party | : | AKSHAY M R |
| Stamp Duty Paid By | : | AKSHAY M R |
| Stamp Duty Amount(Rs.) | : | 100<br>(One Hundred only) |

सत्यमेव जयते

NOTARY C.R. SEETHARAM B.Sc., LL.B., MYSORE CITY

Karnataka State Co-operative Societies Association (R) Shop No. 52 Lansdowne Building Mysore

AKSHAY M R IN-KA92641536442781U RS. 100 01-AUG-2022 06:07 PM

IN-KA92641536442781U

Please write or type below this line

# ಬಾಡಿಗೆ ಕರಾರು ಪತ್ರ

ಸನ್ ಎರಡು ಸಾವಿರದ ಇಪ್ಪತ್ತೆರಡನೇ ಇಸವಿ ಆಗಸ್ಟ್ ಮಾಹೆ ದಿನಾಂಕ: ಒಂದರಲ್ಲೂ (01.08.2022) ಮೈಸೂರು ಸಿಟಿ, ಮೇಟಗಳ್ಳಿ ಅಂಚೆ, ಬಿ.ಎಂ.ಶ್ರೀ.ನಗರ. 2ನೇ ಮುಖ್ಯರಸ್ತೆ, 2ನೇ ಕ್ರಾಸ್, ಮನೆ ನಂ.36 ಮೊದಲನೇ ಮಹಡಿ ಇಲ್ಲಿ ವಾಸವಾಗಿರುವ ಸುಮಾರು 59 ವರ್ಷ ವಯಸ್ಸಿನ ಶ್ರೀ.ಅಶ್ವಥ್ ರವರು ಇನ್ನು ಮುಂದೆ ಒಂದನೇ ಪಾರ್ಟಿ ಮಾಲೀಕರು ಎಂದು ಕರೆಯಲ್ಪಡುವವರು.

.. ..

NO OF CORRECTIONS

**Statutory Alert:**

1. The authenticity of this Stamp certificate should be verified at www.shcilestamp.com or using e-Stamp Mobile App of Stock Holding. Any discrepancy in the details on this Certificate and as available on the website / Mobile App renders it invalid.
2. The onus of checking the legitimacy is on the users of the certificate.
3. In case of any discrepancy please inform the Competent Authority.

Scanned with CamScanner

ಮೈಸೂರು ಸಿಟಿ, ಮೇಟಗಳ್ಳಿ ಅಂಚೆ, ಬಿ.ಎಂ.ಶ್ರೀ.ನಗರ. 2ನೇ ಮುಖ್ಯರಸ್ತೆ, 2ನೇ ಕ್ರಾಸ್, ಮನೆ ನಂ.36 ರ ಎರಡನೇ ಮಹಡಿಯಲ್ಲಿ ವಾಸವಾಗಿರುವ ಶ್ರೀ.ರಂಗಸ್ವಾಮಿ.ಬಿ. ಮಗನಾದ ಸುಮಾರು 29 ವರ್ಷ ವಯಸ್ಸಿನ **ಶ್ರೀ.ಅಕ್ಷಯ್.ಎಂ.ಆರ್.** ರವರು ಬಾಡಿಗೆದಾರರಾಗಿರುತ್ತಾರೆ. ಇನ್ನು ಮುಂದೆ ಎರಡನೇ ಪಾರ್ಟಿ ಬಾಡಿಗೆದಾರರು ಎಂದು ಕರೆಯಲ್ಪಡುವವರು ಆದ ಉಭಯತ್ರರೂ ಸೇರಿ ಮಾಡಿಕೊಂಡ ಬಾಡಿಗೆ ಕರಾರಿನ ಕ್ರಮವೇನೆಂದರೆ:-

ಒಂದು ಮತ್ತು ಎರಡನೇ ಪಾರ್ಟಿದಾರರೆಂದರೆ ಅವರ ವಾರಸುದಾರರು, ಹಕ್ಕುದಾರರು ಮತ್ತು ಪ್ರತಿನಿಧಿಗಳು ಎಂದು ಸಹಾ ಭಾವಿಸತಕ್ಕದ್ದು.

ಅದಾಗಿ ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಪೂರ್ತಾ ಮನೆಯು ಒಂದನೇ ಪಾರ್ಟಿಯ ಸ್ವಾಧೀನ ಹಾಗೂ ಹಕ್ಕು ಬಾಧ್ಯತೆಗೆ ಒಳಪಟ್ಟ ಸ್ವತ್ತಾಗಿದ್ದು, ಎರಡನೇ ಪಾರ್ಟಿ ಮಾಹೆಯಾನ ಬಾಡಿಗೆ ಪಾವತಿಸುವ ಮೇರೆ ಸದರಿ ಮನೆಯನ್ನು ಬಾಡಿಗೆಗೆ ಕೋರಿ, ಒಂದನೇ ಪಾರ್ಟಿ ನೀಡಲು ಸಮ್ಮತಿಸಿ, ಉಭಯತ್ರರೂ ಈ ಕೆಳಕಂಡ ಷರತ್ತುಗಳನ್ವಯ ಕರಾರು ಮಾಡಿಕೊಂಡಿರುತ್ತಾರೆ.

ಷರತ್ತುಗಳು:-

1. ಒಂದನೇ ಪಾರ್ಟಿ ಎರಡನೇ ಪಾರ್ಟಿಯಿಂದ ಮುಂಗಡ ಮೊಬಲಗು **ರೂ.30,000/- (ಮೂವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು** ಸಾಕ್ಷಿಗಳ ಸಮಕ್ಷಮ ಎರಡನೇ ಪಾರ್ಟಿಯವರಿಂದ ಒಂದನೇ ಪಾರ್ಟಿಯವರು ಪಡೆದುಕೊಂಡಿರುತ್ತಾರೆ.
2. ಒಂದನೇ ಪಾರ್ಟಿ ಎರಡನೇ ಪಾರ್ಟಿಗೆ ದಿನಾಂಕ: **01.08.2022** ರಂದು ಸದರಿ ಸ್ವತ್ತಿನ ಸ್ವಾಧೀನ ನೀಡಲು ಒಪ್ಪಿದ್ದು, ಸದರಿ ಬಾಡಿಗೆ ಕರಾರು ದಿನಾಂಕ: **01.08.2022** ರಿಂದ **ಹನ್ನೊಂದು (11) ತಿಂಗಳ** ಅವಧಿಯದಾಗಿರುತ್ತದೆ. ದಿನಾಂಕ **31.07.2023 ರವರೆಗೆ (ಹನ್ನೊಂದು ತಿಂಗಳ ಅವಧಿಯಿದ್ದು)** ಇಸವಿಯದ್ದಾಗಿರುತ್ತದೆ. ಅವಧಿಯ ನಂತರ ಉಭಯತ್ರರೂ ಒಪ್ಪಿಕೊಂಡು ಕರಾರನ್ನು ಮುಂದುವರೆಸಬಹುದಾಗಿರುತ್ತದೆ.
3. ಎರಡನೇ ಪಾರ್ಟಿ ಮಾಹೆಯಾನ ಬಾಡಿಗೆ **ರೂ4,500/- (ನಾಲ್ಕು ಸಾವಿರದ ಐನೂರು ರೂಪಾಯಿಗಳು ಮಾತ್ರ) ಗಳನ್ನು** ಎರಡನೇ ಪಾರ್ಟಿಯವರು ಒಂದನೇ ಪಾರ್ಟಿಯವರಿಗೆ ಪ್ರತಿ ತಿಂಗಳು 1 ರಿಂದ 5ನೇ ತಾರೀಖಿಗೆ ಬಾಡಿಗೆಯನ್ನು ಪಾವತಿಸತಕ್ಕದ್ದು.
4. ಎರಡನೇ ಪಾರ್ಟಿ ಸದರಿ ಮನೆಯಲ್ಲಿ **ವಾಸ ಮಾಡುವ ಸಲುವಾಗಿ ಮಾತ್ರ** ಉಪಯೋಗಿಸತಕ್ಕದ್ದು. ಹಾಗೂ ಬಾಡಿಗೆ ಅವಧಿ ಪೂರ್ಣ ಒಂದನೇ ಪಾರ್ಟಿಯ ಯಾವುದೇ ಅಡೆತಡೆ ಇಲ್ಲದೆ ನಡೆಸಲು ಸಂಪೂರ್ಣ ಹಕ್ಕುಳ್ಳವರಾಗಿರುತ್ತಾರೆ.
5. ಎರಡನೇ ಪಾರ್ಟಿ ತಮಗಿರುವ ಬಾಡಿಗೆಯ ಹಕ್ಕನ್ನು ಅನ್ಯರಿಗೆ ಶಿಕ್ಮಿ ಒಳಬಾಡಿಗೆ ಪರಾಧೀನ ಮಾಡುವಂತಿಲ್ಲ ಹಾಗೂ ಸಣ್ಣ ಪುಟ್ಟ ರಿಪೇರಿ ಒಂದನೇ ಪಾರ್ಟಿಯ ಅನುಮತಿ ಪಡೆದು ಸ್ವತಃ ಮಾಡಿಸಿಕೊಳ್ಳತಕ್ಕದ್ದು.
6. ಎರಡನೇ ಪಾರ್ಟಿ ಮನೆಯನ್ನು ಅರೂಪಪಡಿಸದೆ ಯಥಾ ಸ್ಥಿತಿಯಲ್ಲಿ ಕಾಪಾಡಿಕೊಂಡು ಬರತಕ್ಕದ್ದು. ಹಾಗೇನಾದರೂ ಡ್ಯಾಮೇಜ್ ಮಾಡಿದಲ್ಲಿ ತಮ್ಮ ಸ್ವಂತ ಖರ್ಚಿನಿಂದ ಸರಿಪಡಿಸತಕ್ಕದ್ದು. ತಪ್ಪಿದಲ್ಲಿ ಉಂಟಾತ್ರಗಕ್ಕ ಖರ್ಚು ವೆಚ್ಚವನ್ನು ಮುಂಗಡ ಮೊಬಲಗಿನಲ್ಲಿ ಹಿಡಿದುಕೊಳ್ಳಲು ಒಂದನೇ ಪಾರ್ಟಿ ಹಕ್ಕುಳ್ಳವರಾಗಿರುತ್ತಾರೆ.
7. ಎರಡನೇ ಪಾರ್ಟಿ ಸ್ವತ್ತಿಗೆ ತಗಲುವ ವಿದ್ಯುತ್ ಶುಲ್ಕವನ್ನು ಹಾಗೂ ನೀರಿನ ಶುಲ್ಕವನ್ನು ಎರಡನೇ ಪಾರ್ಟಿಯವರು ಸಂಬಂಧಪಟ್ಟ ಇಲಾಖೆಗೆ ಪಾವತಿಸತಕ್ಕದ್ದು.

.. .. 3

NOTARY
C.R. SEETHARAM
B.Sc., LL.B.,
MYSORE CITY
Reg. No. 3890
Expired On: 6-3-2027
GOVERNMENT OF INDIA

NO OF CORRECTIONS

Scanned with CamScanner

# DOCUMENT SHEET
# ದಸ್ತಾವೇಜು ಹಾಳೆ

ದಿನಾಂಕ :

Date :

ಈ ಹಾಳೆಯನ್ನು ಯಾವುದೇ ದಸ್ತಾವೇಜಿಗೆ ಉಪಯೋಗಿಸಬಹುದು.

This sheet can be used for any document

ಮುದ್ರಾಂಕ ಶುಲ್ಕ ರೂ.



8. ಬಾಡಿಗೆಯ ಅವಧಿ ತೀರುವಳಿಯಾದ ಕೂಡಲೇ ಒಂದನೇ ಪಾರ್ಟಿ ಪಡೆದಿರುವ ಮುಂಗಡ ಮೊಬಲಗನ್ನು ಬಡ್ಡಿಯಿಲ್ಲದೇ ಒಂದೇ ಗಂಟಿನಲ್ಲಿ ಎರಡನೇ ಪಾರ್ಟಿಗೆ ಪಾವತಿಸಿದ ಕೂಡಲೇ ಎರಡನೇ ಪಾರ್ಟಿ ಮುಂದಿನ ವಾಯಿದೆ ಅಪೇಕ್ಷಿಸದೆ ಯಾವುದೇ ತಕರಾರು ಮಾಡದೆ, ಸ್ವತ್ತು ಖಾಲಿ ಮಾಡಿ ಉತ್ತಮ ಸ್ಥಿತಿಯಲ್ಲಿ ಒಂದನೇ ಪಾರ್ಟಿ ವಶಕ್ಕೆ ನೀಡತಕ್ಕದ್ದು. ಸದರಿ ಮನೆಗೆ ಒಂದನೇ ಪಾರ್ಟಿಯವರು ಬಣ್ಣ ಮಾಡಿಸಿದ್ದು, ಮನೆ ಖಾಲಿ ಮಾಡುವಾಗ ಎರಡನೇ ಪಾರ್ಟಿಯವರು ಮನೆಗೆ ಬಣ್ಣ ಮಾಡಿಸತಕ್ಕದ್ದು.
9. ಎರಡನೇ ಪಾರ್ಟಿ ಸ್ವತ್ತಿನಲ್ಲಿ ಕಾನೂನು ವಿರುದ್ಧವಾದ ಚಟುವಟಿಕೆಗಳನ್ನು ನಡೆಸುವಂತಿಲ್ಲ ಮತ್ತು ಕಾನೂನು ಭಾಹಿರವಾದ ವಸ್ತುಗಳನ್ನು ಶೇಖರಣೆ ಮಾಡುವಂತಿಲ್ಲ. ಒಂದು ವೇಳೆ ಎರಡನೇ ಪಾರ್ಟಿ ಅವಧಿಯ ನಂತರ ಸ್ವತ್ತಿನಲ್ಲಿ ಬಾಡಿಗೆದಾರರಾಗಿ ಮಂದುವರೆದ ಪಕ್ಷದಲ್ಲಿ ಹೊಸ ಕರಾರು ಮಾಡಿಕೊಂಡು ಮಂದುವರೆಯಬಹುದು. ಅವಧಿ ಮುಗಿದ ನಂತರ ಎರಡನೇ ಪಾರ್ಟಿಯವರು ಮತ್ತೆ ಮುಂದುವರೆಯಲು ಇಚ್ಚೆಪಟ್ಟಲ್ಲಿ 5% ಹೆಚ್ಚಿಗೆ ಬಾಡಿಗೆಯನ್ನು ಕೊಟ್ಟು ಮುಂದುವರೆಯತಕ್ಕದ್ದು.
10. ಉಭಯತ್ರರ ಪೈಕಿ ಯಾರಿಗಾದರೂ ಸ್ವತ್ತನ್ನು ಖಾಲಿ ಮಾಡಬೇಕಾದ ಪಕ್ಷದಲ್ಲಿ ಮತ್ತೊಬ್ಬರಿಗೆ ಎರಡು (2) ತಿಂಗಳು ಮುಂಚಿತವಾಗಿ ತಿಳಿಸಿ ಸ್ವತ್ತನ್ನು ಖಾಲಿ ಮಾಡಲು ಉಭಯತ್ರರಿಗೂ ಸಹ ಅವಕಾಶವಿರುತ್ತದೆ.
11. ಸದರಿ ಕರಾರಿನ ಮೂಲ ಪ್ರತಿಯು ಎರಡನೇ ಪಾರ್ಟಿಯ ವಶದಲ್ಲೂ ಹಾಗೂ ಜೆರಾಕ್ಸ್ ಪ್ರತಿಯು ಒಂದನೇ ಪಾರ್ಟಿಯ ವಶದಲ್ಲೂ ಇರತಕ್ಕದ್ದು.

**ಷೆಡ್ಯೂಲ್ ಸ್ವತ್ತಿನ ವಿವರ**

ಮೈಸೂರು ಸಿಟಿ, ಮೇಟಗಳ್ಳಿ ಅಂಚೆ, ಬಿ.ಎಂ.ಶ್ರೀ.ನಗರ. 2ನೇ ಮುಖ್ಯರಸ್ತೆ, 2ನೇ ಕ್ರಾಸ್, ಮನೆ ನಂ.36 ರಲ್ಲಿ ಕಟ್ಟಿರುವ ಆರ್.ಸಿ.ಸಿ. ಎರಡನೇ ಅಂತಸ್ತಿನ ವಾಸದ ಮನೆಯು ಈ ಬಾಡಿಗೆ ಕರಾರಿಗೆ ಒಳಪಟ್ಟ ಸ್ವತ್ತಾಗಿರುತ್ತದೆ. ಇದರಲ್ಲಿ 1 ರೂಂ 1 ಹಾಲ್, 1 ಅಡುಗೆಮನೆ, ಬಾತ್‌ರೂಂ, ಶೌಚಾಲಯ, ವಿದ್ಯುತ್, ಸ್ಯಾನಿಟರಿ, ಸೋಲಾರ್, ಸೌಲಭ್ಯವನ್ನೊಳಗೊಂಡ ಸ್ವತ್ತು ಈ ಬಾಡಿಗೆ ಕರಾರಿಗೆ ಒಳಪಟ್ಟ ಸ್ವತ್ತಾಗಿರುತ್ತದೆ.ಪ

ಸಾಕ್ಷಿಗಳು:-

1) G. S. M. [signature]

ಒಂದನೇ ಪಾರ್ಟಿ/ಮಾಲೀಕರು

2) [signature]

ಎರಡನೇ ಪಾರ್ಟಿ / ಬಾಡಿಗೆದಾರರು

NOTARY
C.R. SEETHARAM
B.Sc., LL.B.,
MYSORE CITY
Reg. No. 3890
Expired On: 6-3-2027
GOVERNMENT OF INDIA

NO OF CORRECTIONS........

ATTESTED BY ME

C.R. Seetharam
Notary, Mysore

10 1 AUG 2022

Scanned with CamScanner